# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ)

CIN:U40109KA2004SGC035177
ನಿಗಮ ಕಛೇರಿ, #29,
ವಿಜಯನಗರ 2 ನೇ ಹಂತ,
ಹಿನಕಲ್, ಮೈಸೂರು-570017
ವೆಬ್ ಸೈಟ್-www.cescmysore.org

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ
ಕಛೇರಿ, ಸೆಸ್ಕ್, ಕಾ&ಪಾ ವಿಭಾಗ, ಬೆಂಗಳೂರು-
ಮೈಸೂರು ರಸ್ತೆ,
ಮಂಡ್ಯ-571401.
ಫೋನ್ ನಂ: 08232-225301
ಇ ಮೇಲ್-eeemdy@cescmysore.org

ನಂ. ಕಾ.ನಿ.ಇಂ/ಸ.ಇಂ(ತಾ)/ಮ.ವಿ/2018-19 2227-28

ದಿನಾಂಕ : - 6 AUG 2018

## ಮಂಡ್ಯ ವಿಭಾಗದ ಉಪ ವಿಭಾಗಗಳ ಎರಡನೇ ತ್ರೈಮಾಸಿಕ ಜನ ಸಂಪರ್ಕ ಸಭಾ ನಡಾವಳಿಗಳು

ಮಂಡ್ಯ ವಿಭಾಗದ ಮಂಡ್ಯ ಉಪ ವಿಭಾಗ, ಕೊತ್ತತ್ತಿ ಉಪ ವಿಭಾಗ ಮತ್ತು ಕೆರಗೋಡು ಉಪ ವಿಭಾಗಗಳ ಎರಡನೇ ತ್ರೈಮಾಸಿಕ ಜನ ಸಂಪರ್ಕ ಸಭೆಯನ್ನು ಕೆರಗೋಡು ಉಪ ವಿಭಾಗದ ಆವರಣದಲ್ಲಿ ದಿನಾಂಕ 27.07.2018 ರಂದು ಅಧೀಕ್ಷಕ ಇಂಜಿನಿಯರ್, ಮಂಡ್ಯ ವೃತ್ತ, ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ನೌಕರರು

1. ಶ್ರೀ ಶ್ರೀನಿವಾಸ್‌ಮೂರ್ತಿ ---- ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಕಛೇರಿ, ಮಂಡ್ಯ.
2. ಶ್ರೀ ಎ.ಎನ್. ರವಿಶಂಕರ್ ---- ಕಾರ್ಯನಿವಾಹಕ ಇಂಜಿನಿಯರ್ (ವಿ),ಕಾ ಮತ್ತು ಪಾ ವಿಭಾಗೀಯ ಕಛೇರಿ, ಮಂಡ್ಯ.
3. ಶ್ರೀ ಎಸ್. ಶಿವಕುಮಾರ್ ---- ಲೆಕ್ಕಾಧಿಕಾರಿ, ಕಾ ಮತ್ತು ಪಾ ವಿಭಾಗೀಯ ಕಛೇರಿ, ಮಂಡ್ಯ.
4. ಶ್ರೀ ಶ್ಯಾಮ್ ಸುಂದರ್ ---- ಲೆಕ್ಕಾಧಿಕಾರಿ ( ಆ.ಪ) ಕಾ ಮತ್ತು ಪಾ ವಿಭಾಗ ಕಛೇರಿ, ಮಂಡ್ಯ.
5. ಶ್ರೀ ಕೆ.ಎನ್.ಶಿವಕುಮಾರ್ ---- ಸಹಾಯಕ ಕಾರ್ಯನಿವಾಹಕ ಇಂಜಿನಿಯರ್ (ವಿ) ಮ.ಉ.ವಿ ಮಂಡ್ಯ.
6. ಶ್ರೀ ಸುಬ್ಬಣ್ಣ ಎನ್. ---- ಸಹಾಯಕ ಕಾರ್ಯನಿವಾಹಕ ಇಂಜಿನಿಯರ್ (ವಿ) ಕೆ.ಉ.ವಿ ಮಂಡ್ಯ.
7. ಶ್ರೀ ಹೆಚ್.ಜೆ. ಜಯಪ್ರಕಾಶ್ ---- ಸಹಾಯಕ ಕಾರ್ಯನಿವಾಹಕ ಇಂಜಿನಿಯರ್ (ವಿ) ಕೊ.ಉ.ವಿ ಮಂಡ್ಯ.
8. ಶ್ರೀ ಶ್ರೀನಿಧಿ. ಜಿ ---- ಸಹಾಯಕ ಇಂಜಿನಿಯರ್ (ತಾ) ಮ.ಉ.ವಿ ಮಂಡ್ಯ.
9. ಕುಮಾರಿ ಶೈಲಜ ---- ಸಹಾಯಕ ಇಂಜಿನಿಯರ್ (ವಿ) (ತಾಂ) ವಿಭಾಗೀಯ ಕಛೇರಿ, ಮಂಡ್ಯ
10. ಶ್ರೀಮತಿ ರೂಪಗಾಂಧಿ ---- ಸಹಾಯಕ ಇಂಜಿನಿಯರ್ (ವಿ) (ತಾಂ) ಕೊತ್ತತ್ತಿ.ಉ.ವಿ, ಮಂಡ್ಯ
11. ಶ್ರೀಮತಿ ಸಪ್ನ ಎಲ್. ---- ಸಹಾಯಕ ಇಂಜಿನಿಯರ್ (ವಿ) (ತಾಂ) ಕೆರಗೋಡು.ಉ.ವಿ, ಮಂಡ್ಯ
12. ಶ್ರೀಮತಿ ಪುಷ್ಪಾಂಜಲಿ ---- ಸಹಾಯಕ ಇಂಜಿನಿಯರ್ (ವಿ) (ತಾಂ) ಗುತ್ತಲು ಶಾಖೆ, ಮ.ಉ.ವಿ, ಮಂಡ್ಯ
13. ಶ್ರೀಮತಿ ಸೌಮ್ಯ ---- ಕಿರಿಯ ಇಂಜಿನಿಯರ್ (ವಿ), ಎಂಸಿ.ರಸ್ತೆ ಶಾಖೆ, ಮ.ಉ.ವಿ.
14. ಮಂಜುನಾಥ್ ಹೆಚ್.ಎನ್ ---- ಕಿರಿಯ ಇಂಜಿನಿಯರ್ (ವಿ), ಷುಗರ್ ಟೌನ್ ಶಾಖೆ, ಮ.ಉ.ವಿ.
15. ನಂಜಯ್ಯ ---- ಕಿರಿಯ ಇಂಜಿನಿಯರ್ (ವಿ) ಹೊಸಹಳ್ಳಿ ಶಾಖೆ, ಮ.ಉ.ವಿ, ಮಂಡ್ಯ.
16. ಶಿವಕುಮಾರ್ ಹೆಚ್.ಕೆ ---- ಕಿರಿಯ ಇಂಜಿನಿಯರ್ (ವಿ) ಗುತ್ತಲು ಶಾಖೆ, ಮ.ಉ.ವಿ, ಮಂಡ್ಯ.
17. ಲೋಕೇಶ್ ಚೌಹಾನ್ ---- ಕಿ.ಇಂಜಿನಿಯರ್ ಕೊತ್ತತ್ತಿ ಶಾಖೆ, ಕೊತ್ತತ್ತಿ.ಉ.ವಿ, ಮಂಡ್ಯ
18. ಶೀನಿವಾಸ್‌ಮೂರ್ತಿ ---- ಕಿ.ಇಂಜಿನಿಯರ್ ವಿ.ಸಿ.ಫಾರಂ ಶಾಖೆ, (ಪ್ರಭಾರ) ಕೊತ್ತತ್ತಿ.ಉ.ವಿ, ಮಂಡ್ಯ
19. ವಿನೋದ್‌ಕುಮಾರ್ ---- ಸ.ಇಂಜಿನಿಯರ್ ತಗ್ಗಹಳ್ಳಿ ಶಾಖೆ, (ಪ್ರಭಾರ) ಕೊತ್ತತ್ತಿ.ಉ.ವಿ, ಮಂಡ್ಯ
20. ಆದಿತ್ಯ ಹೆಚ್.ಎನ್ ---- ಕಿರಿಯ ಇಂಜಿನಿಯರ್, ಬಸರಾಳು ಶಾಖೆ, ಕೆರಗೋಡು.ಉ.ವಿ, ಮಂಡ್ಯ
21. ಮರಿಸ್ವಾಮಿ ಹೆಚ್.ಎಸ್ ---- ಕಿ.ಇಂಜಿನಿಯರ್ ಕೆರಗೋಡು ಶಾಖೆ, ಕೆರಗೋಡು.ಉ.ವಿ, ಮಂಡ್ಯ
22. ಶ್ರೀಮತಿ ಸೌಮ್ಯ ---- ಕಿ.ಇಂಜಿನಿಯರ್ ಕೀಲಾರ ಶಾಖೆ, ಕೆರಗೋಡು.ಉ.ವಿ, ಮಂಡ್ಯ

ಸಭೆಗೆ ಬಂದಿದ್ದ ಅಧಿಕಾರಿಗಳು / ನೌಕರರು / ಸಾರ್ವಜನಿಕರನ್ನು ಅಧೀಕ್ಷಕ ಇಂಜಿನಿಯರ್, ಕಾ ಮತ್ತು ಪಾ ವೃತ್ತ, ಮಂಡ್ಯರವರು ಸ್ವಾಗತಿಸಿದರು.

ಆಯಾ ಉಪ ವಿಭಾಗಳಿಗೆ ಸಂಬಂಧಿಸಿದ ಗ್ರಾಹಕರು ಭಾಗವಹಿಸಿದ್ದು, ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರ ಅಹವಾಲುಗಳನ್ನು ಸ್ವೀಕರಿಸಿದ್ದು ವಿವರಗಳು ಈ ಕೆಳಕಂಡಂತಿವೆ.

ಮಂಡ್ಯ ಉಪ ವಿಭಾಗ

| ಕ್ರ. ಸಂ. | ದೂರು ದಾರರ ಹೆಸರು ಮತ್ತು ವಿಳಾಸ | ದೂರಿನ ಸಾರಾಂಶ | ಷರಾ |
|---|---|---|---|
| 1 | ಶ್ರೀ ರಾಜು , ಗುತ್ತಲು , ಮಂಡ್ಯ ಸಿಟಿ | ಆರ್.ಆರ್. ಸಂಖ್ಯೆ 33502 ರವರ ಎಲ್.ಟಿ-3 ಸ್ಥಾವರವು ಶಾಶ್ವತ ನಿಲುಗಡೆಗೊಂಡಿದ್ದು ಇದರ ಠೇವಣಿ ಮೊತ್ತವನ್ನು ನೀಡಲು ಕೋರಿರುತ್ತಾರೆ. | ಸದರಿ ಸ್ಥಾವರದ ಠೇವಣಿ ಮೊತ್ತವನ್ನು ಆರ್.ಆರ್. ಸಂಖ್ಯೆ AEH-5476 ರ ಬಿಲ್ಲಿಗೆ ಹೊಂದಾಣಿಕೆ ಮಾಡಿರುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಮಂಡ್ಯ ಉಪ ವಿಭಾಗರವರು ಸಭೆಯಲ್ಲಿ ತಿಳಿಸಿದರು. |
| 2. | ಶ್ರೀ ಸತೀಸ್ ಹೆಚ್.ಪಿ, ಮಂಡ್ಯ ಸಿಟಿ | ಸದರಿರವರ ಎಲ್.ಟಿ-5 ಸ್ಥಾವರಕ್ಕೆ 5 ಹೆಚ್.ಪಿ ವಿದ್ಯುತ್ ಸಂಪರ್ಕವನ್ನು ಕೋರಿರುತ್ತಾರೆ. | ಸದರಿರವರ ಎಲ್.ಟಿ-5 ಸ್ಥಾವರಕ್ಕೆ 3 ಹೆಚ್.ಪಿ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ನೀಡಲು ಅಧೀಕ್ಷಕ ಇಂಜಿನಿಯರ್ (ವಿ), ಮಂಡ್ಯ ವೃತ್ತರವರು ತಿಳಿಸಿದ್ದು, ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. |

ಕೊತ್ತತ್ತಿ ಉಪ ವಿಭಾಗ

| ಕ್ರ. ಸಂ. | ದೂರು ದಾರರ ಹೆಸರು ಮತ್ತು ವಿಳಾಸ | ದೂರಿನ ಸಾರಾಂಶ | ಷರಾ |
|---|---|---|---|
| 1. | ರವಿಕುಮಾರ್, ಚನ್ನಪ್ಪನದೊಡ್ಡಿ | ಚನ್ನಪ್ಪನದೊಡ್ಡಿ ಗ್ರಾಮದಲ್ಲಿ ಮಳೆ ಗಾಳಿಯಿಂದ ಕಂಬಗಳು ಮುರಿದಿದ್ದು, 6 ತಿಂಗಳಾದರು ಬದಲಾಯಿಸಿರುವುದಿಲ್ಲ. ಬದಲಾಯಿಸಲು ಮನವಿ ಸಲ್ಲಿಸಿರುತ್ತಾರೆ. | ಸದರಿ ಸ್ಥಳವನ್ನು ಪರಿಶೀಲಿಸಿ 07 ದಿನದೊಳಗಾಗಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯಿತು. |
| 2. | ದೇವೇಗೌಡ , ಕಾಳೇನಹಳ್ಳಿ | ಅಕ್ರಮ-ಸಕ್ರಮ ಯೋಜನೆಯಡಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ನೀಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. | ಅಕ್ರಮ-ಸಕ್ರಮ ಯೋಜನೆಯಡಿ ಅಂದಾಜುಪಟ್ಟಿ ತಯಾರಿಸಲು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯಿತು. |
| 3. | ದೊಡ್ಡ ಬೊಮ್ಮೇಗೌಡ, ಬೇಲೂರು | ಮಾರ್ಗದಾಳು ಶ್ರೀಕಾಂತ್‌ರವರು ಗ್ರಾಹಕರಿಗೆ ಸರಿಯಾಗಿ ಸ್ಪಂದಿಸದೆ ಇರುವುದಕ್ಕೆ ಸದರಿರವರನ್ನು ಬದಲಾಯಿಸಲು ಕೋರಿದರು. | ಈ ವಿಷಯವಾಗಿ ಸದರಿ ಮಾರ್ಗದಾಳು ರವರ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡಲು ತಿಳಿಸಲಾಯಿತು. |
| 4 | ಮಹದೇವರಾವ್, ಹನಿಯಂಬಾಡಿ | ಪವರ್ ಸ್ಥಾವರಕ್ಕೆ ಕಾಮಗಾರಿ ನಿರ್ವಹಿಸುವ ಕೆಲಸಕ್ಕೆ ನೊಂದಣಿಗಾಗಿ ಸಲ್ಲಿಸಿದ್ದ 'ಎ' ಫಾರಂ ಅನ್ನು ಶಾಖಾಧಿಕಾರಿರವರು ಬದಲಾಯಿಸಿ ಬೇರೆಯವರಿಗೆ ನೀಡಿರುತ್ತಾರೆಂದು ದೂರಿ ಇವರ ಕಾರ್ಯ ವೈಕರಿಯ ಬಗ್ಗೆ ಅಸಂತೃಪ್ತಿ ವ್ಯಕ್ತಪಡಿಸಿ ಈ ವಿಷಯವಾಗಿ ಸೂಕ್ತ ಕ್ರಮ ಕೈಗೊಳ್ಳಲು ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. | ಈ ವಿಷಯವಾಗಿ ಸದರಿ ಶಾಖಾಧಿಕಾರಿರವರನ್ನು ವಿಚಾರಣೆ ನಡೆಸಿ ವರದಿ ನೀಡಲು ತಿಳಿಸಲಾಯಿತು. |
| 5 | ಮರುಳು ಸಿದ್ದಪ್ಪ, ಸೌದೇನಹಳ್ಳಿ | ಸೌದೇನಹಳ್ಳಿಯಲ್ಲಿರುವ ಹಾಲಿ ಇರುವ ಪರಿವರ್ತಕವು ಅಧಿಕ ಹೊರೆಯಿಂದ ಸುಟ್ಟು ಹೋಗುತ್ತಿದ್ದು, ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡಲು ಕೋರಿರುತ್ತಾರೆ. | ಅಕ್ರಮ ಸಕ್ರಮ ಯೋಜನೆಯಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ತಯಾರಿಸಿ ಸಲ್ಲಿಸಲು ತಿಳಿಸಿದರು. |
| 6 | ಹೆಚ್.ಕೆ. ರೈಸ್ ಇಂಡಸ್ಟ್ರೀಸ್, ತೂಬಿನಕೆರೆ | RR No AMHT-117 ಕಂದಾಯ ತೆರಿಗೆ ನೀಡಲು ಕೋರಿರುತ್ತಾರೆ. | ಈ ವಿಷಯವಾಗಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಯಿತು. |

| | | | |
|---|---|---|---|
| 7 | ಕರಿ ಸಪ್ಪಯ್ಯ, ಟಿ. ಮಲ್ಲಿಗೆರೆ | 63 ಕೆ.ವಿ.ಎ ಪರಿವರ್ತಕವು ಸುಟ್ಟು ಹೋಗಿದ್ದು, 2 ತಿಂಗಳಾದರು ಬದಲಾಯಿಸಿರುವುದಿಲ್ಲವೆಂದು ತಿಳಿಸಿದ್ದು, ಬದಲಾಯಿಸಲು ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ. | ಅಕ್ರಮ-ಸಕ್ರಮ ಯೋಜನೆಯಡಿ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಲು ಅಂದಾಜುಪಟ್ಟಿ ತಯಾರಿಸಲು ಸೂಕ್ತ ಕೈಗೊಳ್ಳಲು ತಿಳಿಸಲಾಯಿತು. |
| 8 | ಕೆ.ಗೋಪಾಲ್ ಗೌಡ, ಕಾಳೇನಹಳ್ಳಿ | ಕುಡಿಯುವ ನೀರಿನ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ನೀಡಲು ಕೋರಿರುತ್ತಾರೆ. | ಪಂಚಾಯಿತಿಯಿಂದ ಕುಡಿಯುವ ನೀರಿನ ಸ್ಥಾವರಕ್ಕೆ ಅರ್ಜಿ ನೊಂದಾಯಿಸಿ ನಂತರ ವಿದ್ಯುತ್ ಸಂಪರ್ಕ ನೀಡಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕೊತ್ತತ್ತಿ ಉಪ ವಿಭಾಗರವರು ತಿಳಿಸಿದರು. |
| 9 | ದೊಡ್ಡ ಬೊಮ್ಮೇಗೌಡ, ಬೇಲೂರು | ಸುಧಾಕರ್, ಗುತ್ತಿಗೆ ಆಧಾರ ಮೇಲೆ ಕೆಲಸ ನಿರ್ವಹಿಸುತ್ತಿರುವ ಲಾರಿ ಚಾಲಕ ಸಾಮಾಗ್ರಿಗಳನ್ನು ಸಾಗಿಸುವ ಸಮಯದಲ್ಲಿ 500 ರೂ. ಹಣ ನೀಡುವಂತೆ ಡಿಮ್ಯಾಂಡ್ ಮಾಡುತಿದ್ದು, ಇವರ ವಿರುದ್ದ ಶಿಸ್ತು ಕ್ರಮ ಜರುಗಿಸಲು ಕೋರಿ ಮನವಿ ಪತ್ರ ಸಲ್ಲಿಸಿರುತ್ತಾರೆ. | ಈ ವಿಷಯವಾಗಿ ವಿಚಾರಣೆ ನಡೆಸಿ ವರದಿ ಸಲ್ಲಿಸಲು ತಿಳಿಸಲಾಯಿತು. |
| | ನಾಗರಾಜು, ಮಾರಸಿಂಗನಹಳ್ಳಿ | 11 ಕೆ.ವಿ. ಮಾರ್ಗದಲ್ಲಿ ಅಡಚಣೆ ಉಂಟಾಗುತ್ತಿದ್ದು, ಇದರಿಂದ ವಿದ್ಯುತ್ ವ್ಯತ್ಯವಾಗುತ್ತಿದ್ದು, ಇದನ್ನು ಸರಿಪಡಿಸಿಕೊಡಲು ಕೋರಿರುತ್ತಾರೆ. | 11 ಕೆ.ವಿ. ಮಾರ್ಗವನ್ನು ಪರಿಶೀಲಿಸಿ, ಕ್ರಮ ಕೈಗೊಂಡು ವರದಿಯನ್ನು 3 ದಿನದೊಳಗೆ ಸಲ್ಲಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಕೊತ್ತತ್ತಿ ಉಪ ವಿಭಾಗರ ಸೂಚಿಸಲಾಯಿತು. |

**ಕೆರಗೋಡು ಉಪ ವಿಭಾಗ**

| ಕ್ರ ಸಂ. | ದೂರು ದಾರರ ಹೆಸರು ಮತ್ತು ವಿಳಾಸ | ದೂರಿನ ಸಾರಾಂಶ | ತೆಗೆದುಕೊಂಡ ಕ್ರಮ |
|---|---|---|---|
| 1 | ಎಲ್. ರಾಜು, ಬಿಳಿದೇಗಲು | ಲಂಬೋದರ ಚಾಲನ್ ಬಳಿ ಹಾಲಿ ಇರುವ 100 ಕೆ.ವಿ.ಎ ಪರಿವರ್ತಕದ ಮೇಲೆ ಅಧಿಕ ಹೊರೆಯಾಗಿರುವುದರಿಂದ ಹೆಚ್ಚುವರಿಯಾಗಿ 63 ಕೆ.ವಿ.ಎ ಪರಿವತರ್ಕವನ್ನು ಅಳವಡಿಸಿಕೊಡಲು ಮನವಿ ಸಲ್ಲಿಸಿರುತ್ತಾರೆ. | ಈ ವಿಷಯವಾಗಿ ಸ್ಥಳ ಪರಿಶೀಲಿಸಿ ಹೆಚ್ಚುವರಿಯಾಗಿ 63 ಕೆ.ವಿ.ಎ ಗೆ ಅಂದಾಜಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು. |

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

**ಕಾರ್ಯ ನಿರ್ವಾಹಕ ಅಭಿಯಂತರರು (ವಿ)**
ಸೆಸ್ಕ್, ಕಾ ಮತ್ತು ಪಾ ಮಂಡ್ಯ ವಿಭಾಗ,
ಮಂಡ್ಯ

ಪ್ರತಿಯನ್ನು ಕೃಪಾವಹಗಹನೆಗಾಗಿ ಸಲ್ಲಿಸಲಾಗಿದೆ:-

1. ಅಧೀಕ್ಷಕ ಇಂಜಿನಿಯರ್ (ವಿ), ಸೆಸ್ಕ್, ಕಾ ಮತ್ತು ಪಾ ವೃತ್ತ, ಮಂಡ್ಯ.

ಪ್ರತಿಯನ್ನು :-

1. ಲೆಕ್ಕಾಧಿಕಾರಿಗಳು, ಮಂಡ್ಯ ವಿಭಾಗ ಕಛೇರಿ, ಮಂಡ್ಯ.
2. ಪ್ರತಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೆರಗೋಡು ಮತ್ತು ಕೊತ್ತತ್ತಿ ಉ.ವಿಭಾಗ ಮಂಡ್ಯರವರ ಮಾಹತಿ ಕಳುಹಿಸಿ ಕೊಡುತ್ತಾ, ಅನುಪಾಲನಾ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಗಿದೆ.
3. ಸ.ಇಂ. (ತಾ)